# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಆಯುಕ್ತರ ಕಚೇರಿ, ಕೇಂದ್ರ ಕಚೇರಿ, ವೃತ್ತ, ವಿಭಾಗ ಮತ್ತು ಉಪ ವಿಭಾಗ ಕಚೇರಿಗಳಿಗೆ ಸಿಬ್ಬಂದಿ ಹಂಚಿಕೆ – ಪುನರ್ ರಚನೆ ಕುರಿತು ಆದೇಶ.

**ಓದಲಾಗಿದೆ:-**

1. ಆದೇಶ ಸಂಖ್ಯೆ ಗ್ರಾಅಪ 56 ಗ್ರಾನೀಸ (2) 2013 ದಿನಾಂಕ 04-03-2014
2. ಆದೇಶ ಸಂಖ್ಯೆ ಗ್ರಾಅಪ 210 ಜಿಪಅ 2014 ದಿನಾಂಕ 03-06-2014.
3. ಅಧಿಸೂಚನೆ ಸಂಖ್ಯೆ ಗ್ರಾಅಪ 139 ಸೇಶಿಕಾ 91 ದಿನಾಂಕ 24-05-2008

*****

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 04-03-2014ರ ಸರ್ಕಾರದ ಆದೇಶದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯನ್ನು ಸೃಜಿಸಲಾಗಿದೆ. ಸದರಿ ಆದೇಶಕ್ಕೆ ಲಗತ್ತಿಸಿದ ಅನುಬಂಧ-ಎ, ಅನುಬಂಧ-ಬಿ(ಭಾಗ-1) ಮತ್ತು ಅನುಬಂಧ-ಬಿ (ಭಾಗ-2)ರಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಆಯುಕ್ತರ ಕಚೇರಿ, ಮುಖ್ಯ ಇಂಜಿನಿಯರ್ ರವರ ಕಚೇರಿ, ವೃತ್ತ ಕಚೇರಿ, ವಿಭಾಗ ಕಚೇರಿ ಮತ್ತು ಉಪ ವಿಭಾಗ ಕಚೇರಿಗಳಿಗೆ ವಿವಿಧ ವೃಂದಗಳ ಹುದ್ದೆಗಳನ್ನು ಸೃಜಿಸಿ ಸದರಿ ಹುದ್ದೆಗಳನ್ನು ತುಂಬುವ ಬಗ್ಗೆ ಆದೇಶಿಸಲಾಗಿತ್ತು. ಈ ರೀತಿ ಸೃಜಿಸಲಾದ ಹುದ್ದೆಗಳನ್ನು ತುಂಬುವ ದಿಸೆಯಲ್ಲಿ ಹೊರಡಿಸಿದ ಅನುಬಂಧಗಳಲ್ಲಿ ಕೆಲವೊಂದು ನ್ಯೂನ್ಯತೆಗಳು ಕಂಡುಬಂದ ಹಿನ್ನೆಲೆಯಲ್ಲಿ ಈ ಕುರಿತಂತೆ ಸರ್ಕಾರವು ಪುನರಾವಲೋಕಿಸಿ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 04-03-2014ರ ಆದೇಶಕ್ಕೆ ಲಗತ್ತಿಸಿದ ಅನುಬಂಧ-ಎ, ಅನುಬಂಧ-ಬಿ(ಭಾಗ-1) ಮತ್ತು ಅನುಬಂಧ-ಬಿ (ಭಾಗ-2) ಗಳನ್ನು ರದ್ದುಪಡಿಸಿ, ಹೊಸದಾಗಿ ವಿವಿಧ ವೃಂದಗಳ ಹುದ್ದೆಗಳನ್ನು ಮಂಜೂರು ಮಾಡಲು ತೀರ್ಮಾನಿಸಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ 2 ಗುಣ ನಿಯಂತ್ರಣ ವಿಭಾಗಗಳನ್ನು ಮಂಜೂರು ಮಾಡಿದ್ದು, ಸದರಿ 2 ಗುಣ ನಿಯಂತ್ರಣ ವಿಭಾಗಗಳನ್ನು ರದ್ದುಪಡಿಸಲು ಹಾಗೂ ಸದರಿ ವಿಭಾಗಗಳ ಕಾರ್ಯ ವ್ಯಾಪ್ತಿಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವ್ಯಾಪ್ತಿಯಲ್ಲಿನ ಗುಣ ನಿಯಂತ್ರಣ ವಿಭಾಗಗಳಲ್ಲಿ ಮುಂದುವರೆಸಲು ತೀರ್ಮಾನಿಸಿದೆ.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಸಂಬಂಧಿಸಿದಂತೆ ವಿವಿಧ ವೃಂದದ ಹುದ್ದೆಗಳನ್ನು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಅಧಿಸೂಚನೆಯಲ್ಲಿನ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಲಾಗಿದೆ. ಪ್ರಸಕ್ತ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯನ್ನು ಪ್ರತ್ಯೇಕವಾಗಿ ಸೃಜಿಸಿರುವುದರಿಂದ ಪಂಚಾಯತ್ ರಾಜ್ಯ ಇಂಜಿನಿಯರಿಂಗ್ ಇಲಾಖೆಯ ಕಾರ್ಯ ವ್ಯಾಪ್ತಿ ಮತ್ತು ಕಾರ್ಯದ ಒತ್ತಡವು ಕಡಿಮೆಯಾಗಿರುವುದರಿಂದ ಸದರಿ ಅಂಶವನ್ನು ಪರಿಗಣಿಸಿ ಕಾರ್ಯವ್ಯಾಪ್ತಿ ಮತ್ತು ಕಾರ್ಯದ ಒತ್ತಡಕ್ಕೆ ಅನುಗುಣವಾಗಿ ವಿವಿಧ ವೃಂದಗಳಲ್ಲಿ ಮಂಜೂರಾಗಿರುವ ಹುದ್ದೆಗಳನ್ನು ಮರುಹಂಚಿಕೆ ಮಾಡಲು ಸರ್ಕಾರವು ತೀರ್ಮಾನಿಸಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ 30 ವಿಭಾಗಗಳನ್ನು ಸೃಜಿಸಲಾಗಿದೆ. ಸದರಿ ಆದೇಶದಲ್ಲಿ ಬೆಳಗಾವಿ ಜಿಲ್ಲೆಗೆ ಒಂದು ವಿಭಾಗ ಕಚೇರಿಯನ್ನು ಮಂಜೂರು ಮಾಡಿದ್ದು, ಇದನ್ನು ಮಾರ್ಪಡಿಸಿ ಚಿಕ್ಕೋಡಿ ಕೇಂದ್ರ ಸ್ಥಾನವನ್ನು ಹೊಂದಿರುವಂತೆ ಒಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಚೇರಿಯನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ತೀರ್ಮಾನಿಸಲಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 166 ಜಿಪಅ 2015(2)**
**ಬೆಂಗಳೂರು, ದಿನಾಂಕ: 04.08.2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 56 ಗ್ರಾನೀಸ (2) 2013, ದಿನಾಂಕ 04-03-2014ಕ್ಕೆ ಲಗತ್ತಿಸಿದ್ದ ಅನುಬಂಧ-ಎ, ಅನುಬಂಧ-ಬಿ(ಭಾಗ-1) ಮತ್ತು ಅನುಬಂಧ-ಬಿ (ಭಾಗ-2) ಗಳನ್ನು ರದ್ದುಪಡಿಸಿದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಆಯುಕ್ತರ ಕಛೇರಿ ಮತ್ತು ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಅವರ ವ್ಯಾಪ್ತಿಯಲ್ಲಿ ಬರುವ ವೃತ್ತ ಕಚೇರಿ, ವಿಭಾಗ ಕಚೇರಿ ಮತ್ತು ಉಪ ವಿಭಾಗ ಕಚೇರಿಗಳಿಗೆ ಕ್ರಮವಾಗಿ ಈ ಆದೇಶದ ಜೊತೆ ಲಗತ್ತಿಸಿರುವ ಅನುಬಂಧ-1 ಮತ್ತು ಅನುಬಂಧ-2 ರಂತೆ ವಿವಿಧ ವೃಂದಗಳ ಹುದ್ದೆಗಳನ್ನು ಮಂಜೂರು / ಹಂಚಿಕೆ ಮಾಡಿ ಆದೇಶಿಸಿದೆ.

ಅದೇ ರೀತಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಮುಖ್ಯ ಇಂಜಿನಿಯರ್ ಕಚೇರಿ, ಅವರ ವ್ಯಾಪ್ತಿಯಲ್ಲಿ ಬರುವ ವೃತ್ತ ಕಚೇರಿ, ವಿಭಾಗ ಕಚೇರಿ ಮತ್ತು ಉಪ ವಿಭಾಗ ಕಚೇರಿಗಳಿಗೆ ಈ ಆದೇಶದ ಜೊತೆ ಲಗತ್ತಿಸಿರುವ ಅನುಬಂಧ-3 ರಂತೆ ವಿವಿಧ ವೃಂದಗಳ ಹುದ್ದೆಗಳನ್ನು ಮಂಜೂರು / ಹಂಚಿಕೆ ಮಾಡಿ ಆದೇಶಿಸಿದೆ.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಬಳ್ಳಾರಿ, ದಾವಣಗೆರೆ, ಧಾರವಾಡ ಮತ್ತು ಮಂಗಳೂರು ಕೇಂದ್ರ ಸ್ಥಾನದಲ್ಲಿ ಮಂಜೂರಾಗಿರುವ ವೃತ್ತ ಕಛೇರಿಗಳು ಹಾಗೂ ಮಧುಗಿರಿ (ತುಮಕೂರು), ಹೂವಿನಹಡಗಲಿ (ಬಳ್ಳಾರಿ), ಹರಪನಹಳ್ಳಿ (ದಾವಣಗೆರೆ), ಸಾಗರ (ಶಿವಮೊಗ್ಗ), ಶಿರಸಿ (ಕಾರವಾರ), ಕೆ.ಆರ್.ನಗರ (ಮೈಸೂರು), ಚನ್ನರಾಯಪಟ್ಟಣ (ಹಾಸನ), ಚಿಕ್ಕೋಡಿ (ಬೆಳಗಾವಿ) ಕೇಂದ್ರಸ್ಥಾನ ಹೊಂದಿರುವ ವಿಭಾಗಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಈ ಹಿಂದೆ ಆದೇಶ ಸಂಖ್ಯೆ : ಗ್ರಾಅಪ 210 ಜಿಪಅ 2014, ದಿನಾಂಕ 03-06-2014 ರಲ್ಲಿ ನಿಗಧಿಪಡಿಸಿರುವ ಮುಖ್ಯ ಇಂಜಿನಿಯರ್‌ರವರ ಕಚೇರಿ, ವೃತ್ತ ಕಚೇರಿಗಳು, ವಿಭಾಗ ಕಚೇರಿಗಳು ಮತ್ತು ಉಪ ವಿಭಾಗ ಕಚೇರಿಗಳ ಕೇಂದ್ರ ಸ್ಥಾನಗಳು ಹಾಗೂ ಕಾರ್ಯ ವ್ಯಾಪ್ತಿಯು ಮುಂದುವರೆಯುತ್ತದೆ. ಜೊತೆಗೆ ಸದರಿ ಆದೇಶದಲ್ಲಿ ಬೆಳಗಾವಿ ಜಿಲ್ಲೆಗೆ ಒಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಚೇರಿಯನ್ನು ಮಂಜೂರು ಮಾಡಿದ್ದು, ಇದನ್ನು ಮಾರ್ಪಡಿಸಿ ಸದರಿ ವಿಭಾಗದ ಜೊತೆಗೆ ಚಿಕ್ಕೋಡಿಯಲ್ಲಿ ಹೆಚ್ಚುವರಿಯಾಗಿ ಒಂದು ವಿಭಾಗ ಕಚೇರಿಯನ್ನು ಮಂಜೂರು ಮಾಡಲಾಗಿದೆ. ಈ ಹೆಚ್ಚುವರಿ ವಿಭಾಗದ ವ್ಯಾಪ್ತಿಗೆ ಚಿಕ್ಕೋಡಿ, ಅಥಣಿ, ರಾಯಭಾಗ, ಗೋಕಾಕ್ ಮತ್ತು ಹುಕ್ಕೇರಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗಗಳ ಕಾರ್ಯ ವ್ಯಾಪ್ತಿಯನ್ನು ಹಂಚಿಕೆ ಮಾಡಿ ಸದರಿ ಉಪ ವಿಭಾಗಗಳ ಕಾರ್ಯವ್ಯಾಪ್ತಿಯನ್ನು ಬೆಳಗಾವಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದಿಂದ ಬೇರ್ಪಡಿಸಿದೆ.

ಆದೇಶ ಸಂಖ್ಯೆ ಗ್ರಾಅಪ 210 ಜಿಪಅ 2014 ದಿನಾಂಕ 03-06-2014 ರಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಮಂಜೂರು ಮಾಡಲಾಗಿದ್ದ 2 ಗುಣ ನಿಯಂತ್ರಣ ವಿಭಾಗಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಸದರಿ ವಿಭಾಗಗಳ ಕಾರ್ಯವ್ಯಾಪ್ತಿಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವ್ಯಾಪ್ತಿಯಲ್ಲಿನ ಗುಣ ನಿಯಂತ್ರಣ ವಿಭಾಗಗಳಲ್ಲಿ ಮುಂದುವರೆಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ FD 341 Exp-6 2015, ದಿನಾಂಕ 20-06-2015ರಲ್ಲಿ ನೀಡಿರುವ ಸಹಮತಿ ಅನುಸಾರ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿದ್ದೇಶ್ ಪೂಜಾರಕಟ್ಟೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ: -

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಬೆಂಗಳೂರು ಇವರಿಗೆ -ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವ ಸಲುವಾಗಿ.

ಪ್ರತಿಯನ್ನು :-

1. ಮಹಾಲೇಖಪಾಲರು( ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ / ಆರ್ಥಿಕ ಇಲಾಖೆ / ಲೋಕೋಪಯೋಗಿ ಇಲಾಖೆ.
3. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
6. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು.
8. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
9. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
10. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಲ್ಲಾ ವೃತ್ತ ಕಚೇರಿಗಳು ಮತ್ತು ವಿಭಾಗ ಕಚೇರಿಗಳು.
11. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಎಲ್ಲಾ ವೃತ್ತ ಕಚೇರಿಗಳು ಮತ್ತು ವಿಭಾಗ ಕಚೇರಿಗಳು.
12. ಮಾನ್ಯ ಗ್ರಾಅಪ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
14. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-6)
15. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು-ಎ, ಬಿ ಮತ್ತು ಸಿ ಶಾಖೆಗಳು)
16. ಗ್ರಾ.ಅ.ಪಂ.ರಾಜ್.ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ(ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ/ಸಹಾಯಕರು.
17. ಮೇಲ್ವಿಚಾರಕರು, ಗಣಕ ಯಂತ್ರ ಕೋಶ.
18. ಶಾಖಾ ರಕ್ಷಕ ಕಡತ/ಹೆಚ್ಚುವರಿ ಪ್ರತಿ.

[illegible]

ಅನುಬಂಧ-1

ಆಯುಕ್ತರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ:-

| ಕ್ರ.ಸಂ. | ಹುದ್ದೆ | ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ | ಸೃಜನೆ |
|---|---|---|---|---|
| 1. | ಆಯುಕ್ತರು | ಐ.ಎ.ಎಸ್. ವೃಂದಕ್ಕೆ | 01 | 01 |
| 2. | ಉಪ ಕಾರ್ಯದರ್ಶಿ | 40050-56550 | 02 | 02 |
| 3. | ಉಪ ನಿರ್ದೇಶಕರು | 36300-53850 | 01 | 01 |
| 4. | ಮುಖ್ಯ ಲೆಕ್ಕಾಧಿಕಾರಿ | 40050-56550 | 01 | 01 |
| 5. | ಸಿಸ್ಟಮ್ ಅನಲಿಸ್ಟ್ | | 01 | 01 |
| 6. | ಪತ್ರಾಂಕಿತ ವ್ಯವಸ್ಥಾಪಕರು | 21600-40050 | 02 | 02 |
| 7. | ಕಚೇರಿ ವ್ಯವಸ್ಥಾಪಕರು | 20000-36300 | 02 | 02 |
| 8. | ಲೆಕ್ಕಾಧೀಕ್ಷಕರು | 20000-36300 | 02 | 02 |
| 9. | ಪ್ರಥಮ ದರ್ಜೆ ಲೆಕ್ಕ ಸಹಾಯಕ | 14550-26700 | 04 | 04 |
| 10. | ಪ್ರಥಮ ದರ್ಜೆ ಸಹಾಯಕ | 14550-26700 | 05 | 05 |
| 11. | ಶೀಘ್ರಲಿಪಿಗಾರರು | 14550-26700 | 05 | 05 |
| 12. | ದ್ವಿತೀಯ ದರ್ಜೆ ಲೆಕ್ಕ ಸಹಾಯಕ | 11600-21000 | 04 | 04 |
| 13. | ದ್ವಿತೀಯ ದರ್ಜೆ ಸಹಾಯಕ | 11600-21000 | 05 | 05 |
| 14. | ಬೆರಳಚ್ಚುಗಾರರು | 11600-21000 | 06 | 06 |
| 15. | ವಾಹನ ಚಾಲಕರು | 11600-21000 | 05 | 05 |
| 16. | ಗ್ರೂಪ್ - ಡಿ | 9600-14550 | 06 | 06 |
| | ಒಟ್ಟು: | | 52 | 52 |

(ಸಿದ್ದೇಶ್ ಪೂಜಾರಲಕಟ್ಟೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-೩),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಅನುಬಂಧ-2

## ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಮಂಜೂರು ಮಾಡಿರುವ ಹುದ್ದೆಗಳ ವಿವರ

| ಕ್ರ.ಸಂ. | ವೃಂದದ ಹೆಸರು. | ವೇತನ ಶ್ರೇಣಿ | 01 ಮು.ಇಂ. ರವರ ಕಚೇರಿ | 4 ವೃತ್ತ ಕಚೇರಿಗಳು | 31 ವಿಭಾಗ ಕಚೇರಿಗಳು | 176 ಉಪ ವಿಭಾಗ ಕಚೇರಿಗಳು | ಒಟ್ಟು | ಪಂ.ರಾ.ಇಂ. ಇಲಾಖೆಯಿಂದ ಸ್ಥಳಾಂತರಿಸಲಾದ ಹುದ್ದೆಗಳು | ಸೃಜನೆ |
|---|---|---|---|---|---|---|---|---|---|
| 1. | ಮುಖ್ಯ ಇಂಜಿನಿಯರ್ | 48900-63600 | 01 | - | - | - | 01 | - | 01 |
| 2. | ಅಧೀಕ್ಷಕ ಇಂಜಿನಿಯರ್ | 40050-56550 | 01 | 04 | - | - | 05 | 05 | - |
| 3. | ಕಾರ್ಯಪಾಲಕ ಇಂಜಿನಿಯರ್ | 36300-53850 | 02 | - | 31 | - | 33 | 10 | 23 |
| 4. | ಚೀಫ್ ಕೆಮಿಸ್ಟ್ | 28100-50100 | 02 | - | - | - | 02 | - | 02 |
| 5. | ಸಹಾಯಕ ಕಾರ್ಯಪಾಲ್ಲಕ ಇಂಜಿನಿಯರ್ / ತಾಂತ್ರಿಕ ಸಹಾಯಕರು | 28100-50100 | 04 | 04 | - | 176 | 184 | 06 | 178 |
| 6. | ಸಹಾಯಕ ಇಂಜಿನಿಯರ್ | 22800-43200 | 08 | 08 | 124 | 176 | 316 | 278 | 38 |
| 7. | ಕಿರಿಯ ಇಂಜಿನಿಯರ್ | 17650-32000 | - | 08 | 62 | 528 | 598 | 543 | 55 |
| 8. | ಕೆಮಿಸ್ಟ್ | 22800-43200 | - | - | 31 | - | 31 | - | 31 |
| 9. | ಹಿರಿಯ ಭೂ ವಿಜ್ಞಾನಿ | 28100-43200 | 01 | 04 | - | - | 05 | 05 | - |
| 10. | ಭೂ ವಿಜ್ಞಾನಿ | 22800-43200 | - | - | 31 | - | 31 | 30 | 01 |
| 11. | ರಿಜಿಸ್ಟ್ರಾರ್ | 21600-40050 | 01 | 04 | - | - | 05 | 04 | 01 |
| 12. | ಅಧೀಕ್ಷಕರು | 20000-36300 | 02 | 04 | 31 | - | 37 | 16 ಉಗ್ರಾಣ ಅಧೀಕ್ಷಕ 03 ಅಧೀಕ್ಷಕರು | 18 |
| 13. | ಲೆಕ್ಕಾಧೀಕ್ಷಕರು | 20000-36300 | - | - | 31 | - | 31 | 13 | 18 |
| 14. | ಅಸಿಸ್ಟೆಂಟ್ ಸ್ಟ್ಯಾಟಿಸ್ಟಿಕಲ್ ಆಫೀಸರ್. | 17650-32000 | 01 | 04 | - | - | 05 | 05 | - |
| 15. | ಸ್ಟ್ಯಾಟಿಸ್ಟಿಕಲ್ ಇನ್ಸ್‌ಪೆಕ್ಟರ್ | 14550-26700 | 01 | 04 | - | - | 05 | 05 | - |
| 16. | ಪ್ರಥಮ ದರ್ಜೆ ಲೆಕ್ಕ ಸಹಾಯಕ | 14550-26700 | - | - | 31 | - | 31 | 31 | - |
| 17. | ಪ್ರಥಮ ದರ್ಜೆ ಸಹಾಯಕ | 14550-26700 | 05 | 08 | 31 | 176 | 220 | 25 FDA 26 KRRDA 169 Draughtsman | - |

| | | | | | | | | | |
|---|---|---|---|---|---|---|---|---|---|
| 18. | ದ್ವಿತೀಯ ದರ್ಜೆ ಲೆಕ್ಕ ಸಹಾಯಕ | 11600-21000 | – | – | 62 | – | – | 33 | 29 |
| 19. | ದ್ವಿತೀಯ ದರ್ಜೆ ಸಹಾಯಕ | 11600-21000 | 05 | 12 | 62 | 176 | 255 | 25 ಮೆಕ್ಯಾನಿಕ್ 230 ದ್ವಿ.ದ.ಸ. | – |
| 20. | ಶೀಘ್ರಲಿಪಿಗಾರರು | 14550-26700 | 02 | 04 | 31 | | 37 | 23 ಡ್ರಾಫ್ಟ್ಸ್‌ಮನ್ 04 ಶೀಘ್ರಲಿಪಿಗಾರರು | 10 |
| 21. | ಬೆರಳಚ್ಚುಗಾರರು / ಕಂಪ್ಯೂಟರ್ ಆಪರೇಟರ್ | 11600-21000 | 04 | 08 | 62 | 176 | 250 | 250 ಮೆಕ್ಯಾನಿಕ್ | – |
| 22. | ವಾಹನ ಚಾಲಕ | 11600-21000 | 04 | 04 | 31 | 176 | 215 | 53 ಮೆಕ್ಯಾನಿಕ್ 107 ವಾಹನ ಚಾಲಕ | 55 |
| 23. | ಗ್ರೂಪ್ – ಡಿ | 9600-14550 | 04 | 12 | 93 | 352 | 461 | 461 | – |
| | ಒಟ್ಟು: | | 48 | 92 | 744 | 1936 | 2820 | 2360 | 460 |

(ಸಿದ್ದೇಶ್ [illegible] ಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಅನುಬಂಧ-3

## ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಹಂಚಿಕೆ ಮಾಡಿರುವ ಹುದ್ದೆಗಳ ವಿವರ

| ಕ್ರ. ಸಂ. | ವೃಂದದ ಹೆಸರು | ವೇತನ ಶ್ರೇಣಿ | 01 ಮು.ಇಂ. ರವರ ಕಚೇರಿ | 4 ವೃತ್ತ ಕಚೇರಿಗಳು | 31 ವಿಭಾಗ ಕಚೇರಿಗಳು | 02 ಗುಣ ನಿಯಂತ್ರಣ ವಿಭಾಗಗಳು | 176 ಉಪ ವಿಭಾಗ ಕಚೇರಿಗಳು | ಒಟ್ಟು |
|---|---|---|---|---|---|---|---|---|
| 1. | ಮುಖ್ಯ ಇಂಜಿನಿಯರ್ | 48900-63600 | 01 | - | - | - | - | 01 |
| 2. | ಅಧೀಕ್ಷಕ ಇಂಜಿನಿಯರ್ | 40050-56550 | 01 | 04 | - | - | - | 05 |
| 3. | ಕಾರ್ಯಪಾಲಕ ಇಂಜಿನಿಯರ್ | 36300-53850 | 02 | - | 30 | 2 | - | 34 |
| 4. | ಮುಖ್ಯ ಲೆಕ್ಕಾಧಿಕಾರಿ | 28100-50100 | 01 | - | - | - | - | 01 |
| 5. | ಸಹಾಯಕ ಕಾರ್ಯಪಾಲಕ ಇಂಜಿನಿಯರ್ / ತಾಂತ್ರಿಕ ಸಹಾಯಕರು | 28100-50100 | 04 | 04 | - | - | 176 | 184 |
| 6. | ಸಹಾಯಕ ಇಂಜಿನಿಯರ್ | 22800-43200 | 08 | 08 | 60 | 04 | 176 | 256 |
| 7. | ಕಿರಿಯ ಇಂಜಿನಿಯರ್ | 17650-32000 | - | 08 | 30 | 02 | 528 | 568 |
| 8. | ಹಿರಿಯ ಭೂ ವಿಜ್ಞಾನಿ | 28100-43200 | - | - | - | - | - | - |
| 9. | ಭೂ ವಿಜ್ಞಾನಿ | 22800-43200 | - | - | - | - | - | - |
| 10. | ರಿಜಿಸ್ಟ್ರಾರ್ | 21600-40050 | 01 | 04 | - | - | - | 05 |
| 11. | ಅಧೀಕ್ಷಕರು | 20000-36300 | 04 | 04 | 32 | - | - | 40 |
| 12. | ಲೆಕ್ಕಾಧೀಕ್ಷಕರು | 20000-36300 | 01 | - | 30 | - | - | 31 |
| 13. | ಅಸಿಸ್ಟೆಂಟ್ ಸ್ಟ್ಯಾಟಿಸ್ಟಿಕಲ್ ಆಫೀಸರ್. | 17650-32000 | 01 | 04 | - | - | - | 05 |

| | | | | | | | | |
|---|---|---|---|---|---|---|---|---|
| 14. | ಸ್ಟ್ಯಾಟಿಸ್ಟಿಕಲ್ ಇನ್ಸ್‌ಪೆಕ್ಟರ್ | 14550-26700 | 01 | 04 | – | – | – | 05 |
| 15. | ಪ್ರಥಮ ದರ್ಜೆ ಲೆಕ್ಕ ಸಹಾಯಕ | 14550-26700 | 02 | – | 30 | – | – | 32 |
| 16. | ಪ್ರಥಮ ದರ್ಜೆ ಸಹಾಯಕ | 14550-26700 | 06 | 08 | 30 | 02 | 176 | 222 |
| 17. | ದ್ವಿತೀಯ ದರ್ಜೆ ಲೆಕ್ಕ ಸಹಾಯಕ | 11600-21000 | 02 | – | 60 | – | – | 62 |
| 18. | ದ್ವಿತೀಯ ದರ್ಜೆ ಸಹಾಯಕ | 11600-21000 | 06 | 12 | 60 | 04 | 176 | 258 |
| 19. | ಶೀಘ್ರಲಿಪಿಗಾರರು | 14550-26700 | 02 | 04 | 32 | – | – | 38 |
| 20. | ಬೆರಳಚ್ಚುಗಾರರು / ಕಂಪ್ಯೂಟರ್ ಆಪರೇಟರ್ | 11600-21000 | 06 | 08 | 60 | 4 | 176 | 254 |
| 21. | ವಾಹನ ಚಾಲಕ | 11600-21000 | 04 | 04 | 30 | 02 | 176 | 216 |
| 22. | ಗ್ರೂಪ್ – ಡಿ | 9600-14550 | 06 | 12 | 90 | 06 | 352 | 466 |
| | ಒಟ್ಟು: | | 59 | 88 | 574 | 26 | 1936 | 2683 |

- ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಯ 4 ವೃತ್ತ ಕಛೇರಿಗಳಾದ (1) ದಾವಣಗೆರೆ, (2). ಬಳ್ಳಾರಿ, (3). ಮಂಗಳೂರು, & (4) ಧಾರವಾಡ ಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.
- ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ 8 ವಿಭಾಗ ಕಛೇರಿಗಳಾದ (1) ತುಮಕೂರು –ಮಧುಗಿರಿ, (2) ಬಳ್ಳಾರಿ-ಹಡಗಲಿ, (3) ದಾವಣಗೆರೆ-ಹರಪನಹಳ್ಳಿ (4) ಶಿವಮೊಗ್ಗ-ಸಾಗರ (5) ಹಾಸನ-ಚೆನ್ನರಾಯಪಟ್ಟಣ (6) ಮೈಸೂರು-ಕೆ.ಆರ್.ನಗರ ಮತ್ತು (7) ಉತ್ತರಕನ್ನಡ- ಸಿರಸಿ ಮತ್ತು (8)ಬೆಳಗಾವಿ ಚಿಕ್ಕೋಡಿ ಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

(ಸಿದ್ದೇಶ್ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.